CW.4 PW.4

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.17/2016

| | |
|---|---|
| ಸಾಕ್ಷಿದಾರರ ಹೆಸರು | ವರ್ಷಿತ |
| ತಂದೆಯ ಹೆಸರು | ಪ್ರಕಾಶ್ |
| ವಯಸ್ಸು | 24 ವರ್ಷ |
| ವೃತ್ತಿ | ಖಾಸಗಿ ಕೆಲಸ |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 07.11.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ನಾನು ನೋಡಿರುವುದಿಲ್ಲ. ಚಾಸಾ-1 ರಿಂದ ಚಾಸಾ-3 ರವರ ಪರಿಚಯವಿದೆ. ಚಾಸಾ-6 ಮತ್ತು ಚಾಸಾ-7 ಗೊತ್ತಿರುತ್ತಾರೆ. ಉಳಿದವರು ಗೊತ್ತಿಲ್ಲ.

ದಿನಾಂಕ 16.05.2014 ರಂದು ನಾನು, ನನ್ನ ತಂದೆ ತಾಯಿ ಹಾಗೂ ಅಕ್ಕ ಆಟೋವಿನಲ್ಲಿ ಹೋಗುತ್ತಿದ್ದಾಗ, ನಮ್ಮ ಎದುರಿಗೆ ಒಂದು ಬಸ್ ಅತಿವೇಗ ಮತ್ತು ಅಜಾಗರೂಕತೆಯಿಂದ ಬರುತ್ತಿತ್ತು. ನಾನು ಆಟೋವಿನ ರೈಡ್ ಸೈಡ್ ಕುತಿಳಿದ್ದ ಕಾರಣ ಬಸ್ ಗುದ್ದಿದಾಗ ನನಗೆ ಕಾಲಿಗೆ ಗಾಯವಾಗಿರುತ್ತದೆ. ಸದರಿ ಅಪಘಾತ ಮಧ್ಯಾಹ್ನ 2.30 ಗಂಟೆಗೆ ಆಗಿರುತ್ತದೆ. ಸ್ಥಳೀಯರು ನಮಗೆ ಸಹಾಯ ಮಾಡಿ ಮೊದಲಿಗೆ ಹೊಸದುರ್ಗ ಆಸ್ಪತ್ರೆಗೆ ಕಳುಹಿಸಿದರು. ನಂತರ ಕನಕಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು. ನಂತರ ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆ ಗೆ ಹೋಗಿ ಅಲ್ಲಿಂದ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿಂದ ಬೆಂಗಳೂರಿನಲ್ಲಿ ಗಿರಿನಗರದಲ್ಲಿರುವ ದಿ ಫಲ್ಸ್ ಆಸ್ಪತ್ರೆಗೆ ಹೋಗಿರುತ್ತೇವೆ.

ಬೆಳಗಿನ ಜಾವ ಆಡಿಮಿಟ್ ಆಗಿ ಸಂಜೆಯಷ್ಟರಲ್ಲಿ ನನಗೆ ಅಪರೇಷನ್ ಆಗಿರುತ್ತದೆ. ನನ್ನ ಡಿಸಚಾರ್ಜ್ ಆದ ನಂತರ ಅದೇ ಮುಂದಿನ ತಿಂಗಳಲ್ಲಿ ಪೋಲೀಸರಿಗೆ ಈ ಸಂಬಂಧ ಹೇಳಿಕೆ ಕೊಟ್ಟಿರುತ್ತೇನೆ. ನಮ್ಮ ತಂದೆ ಓಡಿಸುತ್ತಿದ್ದ ಆಟೋ ಸಂಖ್ಯೆ ಕೆಎ-05-ಎಸಿ-2285 ಆಗಿರುತ್ತದೆ.ಸ ದರಿ ಬಸ್ ನ ಸಂಖ್ಯೆ ಕೆಎ-40,ಎಫ್-094 ಆಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಸದರಿ ದಿನ ಬೆಂಗಳೂರಿನಿಂದ ನನ್ನ ಅಕ್ಕನ ಊರಿಗೆ ಹೋಗುತ್ತಿದ್ದೇನು. ಬೆಂಗಳೂರಿನಿಂದ ತಮಿಳುನಾಡುವಿನ ತಗ್ಗಟ್ಟಿಗೆ ಹೋಗಲು ಸುಮಾರು 5 ರಿಂದ 6 ಗಂಟೆಗಳ ಕಾಲಾವಕಾಶ ಬೇಕು ಎಂದರೆ ಸರಿ. ನಮ್ಮ ಆಟೋ ಬಹಳ ಹಳೆಯದಾಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆಗೆ ಆಟೋ ಚಾಲಾಯಿಸಲು ಸರಿಯಾಗಿ ಬರುವುದಿಲ್ಲ ಎಂದರೆ ಸಾಕ್ಷಿಯು ಅವರು 30 ವರ್ಷಗಳಿಂದ ಆಟೋ ಚಾಲನೆ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ಸದರಿ ಆಟೋ ಚಲಾಯಿಸಲು ಕೇವಲ ಬೆಂಗಳೂರಿನ ಪರಿಷ್ಯಾ ಪ್ತಿ ಇತ್ತು ಎಂದರೆ ಆ ರೀತಿ ಏನು ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆಟೋವಿನಲ್ಲಿ ಅಷ್ಟು ದೂರ ಪ್ರ ಯಾಣಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸ್ಥಳದ ರಸ್ತೆ ಸರಿಯಾಗಿ ಇರಲಿಲ್ಲ ಎಂದರೆ ಸಾಕ್ಷಿಯು ಸರಿಯಾಗಿ ಇತ್ತು ಆದರೆ ಅವರು ಸ್ಪೀಡ್ ಕಂಟ್ರೋಲ್ ಮಾಡಲಿಲ್ಲ ಎಂದು ನುಡಿಯುತ್ತಾರೆ. ಅಪಘಾತದ ರಸ್ತೆ ಕಿರಿದಾಗಿತ್ತು ಎಂದರೆ ಸರಿಯಲ್ಲ. ಅಪಘಾತದ ಸ್ಥಳದ ರಸ್ತೆಯು ತಿರುವಿನಲ್ಲಿ ಬರುತ್ತದೆಂದರೆ ಸಾಕ್ಷಿಯು ಒಬ್ಬರ ಗಾಡಿ ಇನ್ನೊಬ್ಬರಿಗೆ ಕಾಣುತ್ತದೆಂದು ನುಡಿಯುತ್ತಾರೆ. ಸದರಿ ದಿನ ನಾವು ಅಲ್ಲಿ ಪ್ರಯಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಈ ಸಂಬಂಧ ನಮ್ಮ ಕುಟುಂಬದವರು ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಅದೇ ರೀತಿ ಪೋಲೀಸರು ಸ್ಥಳಕ್ಕೆ ಬಂದು ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಪೋಲೀಸರು ಠಾಣೆಯಲ್ಲೇ ತಯಾರುಮಾಡಿ ನಮ್ಮ ಮನೆಗೆ ತಂದು ಸಹಿ

ಪಡೆದಿರುತ್ತಾರೆಂದರೆ ಸರಿಯಲ್ಲ. ಕೇವಲ ಪರಿಹಾರದ ಮೊತ್ತವನ್ನು ಪಡೆಯುವ ಉದ್ದೇಶದಿಂದ ಪ್ರಸ್ತುತ ಪ್ರಕರಣದಲ್ಲಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**